ಶ್ರೀ ಬಿ. ಎಸ್. ಯಡಿಯೂರಪ್ಪ.—ಪರಿಶೀಲನೆ ಮಾಡುತ್ತೀರಾ ? ಇಲ್ಲವೇ ಶಿವಮೊಗ್ಗ ಜಿಲ್ಲೆಯನ್ನು ಪುರೆಯುತ್ತೀರಾ ? ಮಾನ್ಯ ಬಸವಲಿಂಗಪ್ಪನವರಿಗೆ ಇದರ ಬಗ್ಗೆ ಇಂಟರೆಸ್ಟ್ ಇದೆ ಎಂದು ನನಗೆ ಗೊತ್ತು. ತಾವು ನನ್ನ ಸಹಾಯಕ್ಕೆ ಬನ್ನಿ.

ಶ್ರೀ ಕೆ.ಎಸ್. ಈಶ್ವರಪ್ಪ.—ಸ್ವಾತಂತ್ರ್ಯ ಬಂದಾಗಿನಿಂದ ಇಲ್ಲಿಯವರೆಗೆ ಶಿವಮೊಗ್ಗ ಜಿಲ್ಲೆಯಿಂದ ಅನೇಕ ಮಂತ್ರಿಗಳು ಬಂದಿದ್ದಾರೆ. ಆದರೂ ಕೂಡ ಶಿವಮೊಗ್ಗ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜನ್ನು ಪ್ರಾರಂಭ ಮಾಡಿಲ್ಲ. ಮೆಡಿಕಲ್ ಕಾಲೇಜಿನ ಬಗ್ಗೆ ಮಲತಾಯಿ ಧೋರಣೆಯನ್ನು ಏಕೆ ಮಾಡುತ್ತೀರೋ ನನಗೆ ಗೊತ್ತಿಲ್ಲ. ಈ ಮಲತಾಯಿ ಧೋರಣೆಯನ್ನು ಬದಿಗೊತ್ತಿ ಈ ಸಲವಾದರೂ ಶಿವಮೊಗ್ಗ ಜಿಲ್ಲೆಗೆ ಮೆಡಿಕಲ್ ಕಾಲೇಜನ್ನು ಕೊಡುವ ಬಗ್ಗೆ ತಾವು ಗಮನ ಕೊಡಬೇಕು.

ಬೀದರ್ ಜಿಲ್ಲೆಯಲ್ಲಿ ಹೈನು ಅಭಿವೃದ್ಧಿ ಯೋಜನೆ

೨೨೦. ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಹಾಗೂ ಪಶು ಸಂಗೋಪನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೀದರ್ ಜಿಲ್ಲೆಯಲ್ಲಿ ಹಾಲು ಉತ್ಪಾದನೆಗೆ ವಿಪುಲ ಅವಕಾಶಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಸರ್ಕಾರವು ಈ ಜಿಲ್ಲೆಯಲ್ಲಿ ಹಾಲು ಪುಡಿ ಘಟಕವನ್ನು ಸ್ಥಾಪಿಸುವ ಬಗ್ಗೆ ಪರಿಗಣಿಸಿದೆಯೇ ?

ಶ್ರೀ ಬಿ ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಪಶು ಸಂಗೋಪನಾ ಸಚಿವರು).—

ಅ) ಬೀದರ್ ಜಿಲ್ಲೆಯಲ್ಲಿ ದಿನವೊಂದಕ್ಕೆ ಸುಮಾರು ೬೦,೦೦೦ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆಯೆಂದು ಅಂದಾಜು ಮಾಡಲಾಗಿದೆ.

ಆ) ಈ ಜಿಲ್ಲೆಯಲ್ಲಿ ಲಭ್ಯವಿರುವ ಹಾಲು ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳ ಗ್ರಾಹಕರ ಬೇಡಿಕೆ ಪೂರೈಸಲು ಸಾಲದ್ದರಿಂದ ಬೀದರ್ ಜಿಲ್ಲೆಯಲ್ಲಿ ಹಾಲು ಪುಡಿ ಘಟಕವನ್ನು ಸ್ಥಾಪಿಸುವ ಅಗತ್ಯ ಇರುವುದಿಲ್ಲ.

ಶ್ರೀ ನಾರಾಯಣರಾವ್ ಮನಹಳ್ಳಿ.—ಸನ್ಮಾನ್ಯ ಅಧ್ಯಕ್ಷರೇ, ೬೦,೦೦೦ ಲೀಟರ್ ಹಾಲು ಬೀದರ್‌ನಲ್ಲಿ ಉತ್ಪಾದನೆಯಾಗುತ್ತಿದೆ ಎಂದು ಮಾನ್ಯ ಮಂತ್ರಿಗಳು ಅಂದಾಜು ಫಿಗರ್ಸ್ ಕೊಟ್ಟಿದ್ದಾರೆ. ಇದಕ್ಕೂ ಹೆಚ್ಚು ಅಂದರೆ ಸುಮಾರು ೨ ೫೦,೦೦೦ ಲೀಟರ್ ಹಾಲಿನ ಉತ್ಪಾದನೆ ಬೀದರ್ ಜಿಲ್ಲೆಯಲ್ಲಿ ಆಗುತ್ತಿದೆ. ಹಾಲು ಉತ್ಪಾದನೆ ಮಾಡುತ್ತಿರುವ ರೈತರು ತಮ್ಮ ಹಾಲನ್ನು ಸಮೀಪವಿರುವಂತಹ ಮಹಾರಾಷ್ಟ್ರ ಹಾಗೂ ಆಂಧ್ರಕ್ಕೆ ಒಯ್ಯುತ್ತಿದ್ದಾರೆ ಅಲ್ಲಿ ಸಾಕಷ್ಟು ಹಾಲನ್ನು ಉತ್ಪಾದನೆ ಮಾಡುತ್ತಿದ್ದಾರೆ. ರೈತರಿಗೆ ಅನುಕೂಲವಾಗುವಂತೆ ಕೂಲಿ ಕಾರ್ಮಿಕರಿಗೆ ಸಹಾಯವಾಗುವಂತೆ ಅಲ್ಲಿ ಹಾಲು ಪುಡಿ ಘಟಕವನ್ನು ಪ್ರಾರಂಭ ಮಾಡಿದರೆ ಅವರು ಪೂರಾಟ ಮಾಡತಕ್ಕಂತಹ ಹಾಲಿಗೆ ಸರಿಯಾದಂತಹ ಬೆಲೆ ಸಿಗುವಂತಹ ನಿರೀಕ್ಷೆ ಇದೆ. ಆದ್ದರಿಂದ ಮಾನ್ಯ ಮಂತ್ರಿಯವರು ಇದನ್ನು ಸ್ಥಾಪನೆ ಮಾಡುವ ಬಗ್ಗೆ ವಿಚಾರ ಮಾಡುತ್ತಾರೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳತಕ್ಕ ವಿಷಯ ಸರ್ಕಾರದ ಗಮನದಲ್ಲಿದೆ. ನಾನು ಜನವರಿ ೨೬ರಂದು ರಿಪಬ್ಲಿಕ್ ಡೇ ದಿವಸ ಬೀದರ್‌ಗೆ ಹೋಗಿ ಭಾಷಣ ಮಾಡುವಾಗ ಅಲ್ಲಿ ಹಾಲಿನ ಘಟಕವನ್ನು ಸ್ಥಾಪನೆ ಮಾಡಬೇಕು ಹಾಗೂ ಅಲ್ಲಿ ಹೆಚ್ಚು ಹೆಚ್ಚು ಹಾಲನ್ನು ಉತ್ಪಾದನೆ ಮಾಡಬೇಕೆಂದು ಹೇಳಿದ್ದೆ. ಹಾಲು ಉತ್ಪಾದನೆ ಮಾಡತಕ್ಕದ್ದು ತಾಯಂದಿರು. ಕೈಯಲ್ಲಿರತಕ್ಕದ್ದು. ಬೀದರ್ ಜಿಲ್ಲೆಯಲ್ಲಿ ವಿಶೇಷವಾಗಿ ತಾಯಂದಿರ ಸೊಸೈಟಿಗಳನ್ನು ಮಾಡಿದ್ದೇವೆ. ಮದರ್ ಕೋ ಆಪರೇಟಿವ್ ಸೊಸೈಟಿಗಳನ್ನು ನಾನು ಪ್ರಾರಂಭ ಮಾಡಿದ್ದೇನೆ. ತಾಯಂದಿರು ಮನೆಯ ಜವಾಬ್ದಾರಿಯನ್ನು ನಡೆಸಿಕೊಂಡು ಹೋಗುತ್ತಿರುತ್ತಾರೆ. ಆದರೆ ಮಕ್ಕಳನ್ನು ಸಾಕುವುದು ಅವರನ್ನು ಶಾಲೆಗಳಿಗೆ ಕಳುಹಿಸುವ ಜವಾಬ್ದಾರಿ ತಾಯಂದಿರ ಮೇಲಿರುತ್ತದೆ. ಆದ್ದರಿಂದ ನೇರವಾಗಿ ತಾಯಿ ಕೈಯಲ್ಲಿ ಹಣಸಿಗುವಂತೆ ವ್ಯವಸ್ಥೆ ಮಾಡಬೇಕೆಂಬ ಉದ್ದೇಶದಿಂದ ಈ ರೀತಿ ಕ್ರಮ ತೆಗೆದು ಕೊಳ್ಳಲು ಪ್ರಯತ್ನ ಮಾಡುತ್ತಿದ್ದೇವೆ. ಬೀದರ್ ಜಿಲ್ಲೆಯಲ್ಲಿ ಈ ತಾಯಂದಿರ ಸೊಸೈಟಿಗಳನ್ನು

ಜಾಸ್ತಿ ಮಾಡಿದ್ದೇವೆ. ಅವುಗಳು ಅಲ್ಲಿ ಯಶಸ್ವಿಯಾಗಿ ನಡೆಯುತ್ತಿವೆ. ಆದ್ದರಿಂದ ಬೀದರ್ ಜಿಲ್ಲೆಯಲ್ಲಿ ತಾಯಂದಿರ ಡೈರಿಯನ್ನು ಸ್ಥಾಪನೆ ಮಾಡಬೇಕೆಂಬ ಬಗ್ಗೆ ನಾನು ಏನು ಘೋಷಣೆಯನ್ನು ಮಾಡಿದ್ದೇವೆ, ಆದನ್ನು ಮಾಡುತ್ತೇನೆ.

ಶ್ರೀ ಜೆ. ಹೆಚ್. ಮಧುಸ್ವಾಮಿ.—ಡೈರಿ ಸ್ಥಾಪನೆ ಮಾಡುವುದು ಸರ್ಕಾರದ ಅಂತಿಮ ನಿರ್ಧಾರವೇ ಅಥವಾ ಎನ್.ಡಿ.ಡಿ.ಬಿ. ಹಾಗೂ ಕೆ.ಎಂ.ಎಫ್ ನವರನ್ನು ಇದರಲ್ಲಿ ಏನಾದರೂ ಇನ್‌ವಾಲ್ವ್ ಮಾಡುತ್ತೀರಾ? ಆಪ್ರೈಸೆಲ್ ರಿಪೋರ್ಟ್ ಬಗ್ಗೆ ಮಂತ್ರಿಯವರಿಗೆ ಏನಾದರೂ ಗೊತ್ತಿದೆಯೇ ಏಕೆಂದರೆ ಅವರು ಒಂದು ಮಾತನ್ನು ಹೇಳಿದರು, ಅದೇನೆಂದರೆ ಈ ಮಹಿಳೆಯ ಸಹಕಾರ ಸಂಘಗಳನ್ನು ಆರಂಭ ಮಾಡುವುದಕ್ಕೆ ನಾವು ಹೊರಟ್ಟಿದ್ದೇವೆಂದು. ಆದರೆ ಇದು ನಾಲ್ಕೈದು ವರ್ಷಗಳಿಂದ ನಡೆಯುತ್ತಿದೆ. ಆದ್ದರಿಂದ ಈ ವರ್ಷ ಇದು ಆರಂಭವಾಗುತ್ತದೆಯೇ ಎಂದು ಕೇಳುತ್ತೇನೆ ?

ಶ್ರೀ ಬಿ. ಬಸವಲಿಂಗಪ್ಪ,—ನಾನು ಸದಸ್ಯರು ಕೆ. ಎಂ. ಎಫ್ ನ ಅಧ್ಯಕ್ಷರು ಇದ್ದಾರೆ. ಅವರಿಗೆ ಎಲ್ಲಾ ಗೊತ್ತಿದೆ. ಅವರು ನನ್ನ ಗೆಳೆಯರು, ಕೆ.ಎಂ.ಎಫ್. ಒಂದು ಸಂಸ್ಥೆ ಇದೆಯೆಂದು ಅವರು ಹೇಳಿದರು. ಯೂನಿಯನ್ ಮಾಡಿದ್ದೇವೆ ಅದು ನನಗೆ ಗೊತ್ತಿದೆ. ಸಹಕಾರ ಸಂಘಗಳು ತಾಯಂದಿರ ಸಂಸ್ಥೆಗಳು. ಇದಕ್ಕೆ ನಾವು ಹೆಚ್ಚಿನ ರೂಪದಲ್ಲಿ ಸಹಾಯ ಮಾಡಿ ಪ್ರತಿಜಿಲ್ಲೆಯಲ್ಲಿ, ಪತ್ರಿ ತಾಲ್ಲೂಕಿನಲ್ಲಿ ಇಂತಹ ವ್ಯವಸ್ಥೆ ಮಾಡಬೇಕೆಂದು ನಾವು ಪ್ರಯತ್ನ ಮಾಡಿದ್ದೇವೆ. ನಮ್ಮ ಕೆ.ಎಂ ಎಫ್.ನ ಅಧ್ಯಕ್ಷರು ಈ ಬಗ್ಗೆ ಬಹಳ ಶ್ರಮವಹಿಸಿ ಕೆಲಸ ಮಾಡುತ್ತಿದ್ದಾರೆ. ಹೇಗೆ ಬೀದರ್ ಜಿಲ್ಲೆಯಲ್ಲಿಯೂ ಮಾಡಲಿಕ್ಕೆ ಸಾಧ್ಯವಾಗುತ್ತೆ ಮಾಡುತ್ತೇವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವೈದ್ಯಾಧಿಕಾರಿಗಳ ನೇಮಕ

೧೩೧. ಶ್ರೀ ಜಿ. ಎಸ್. ಆಚಾರ್ (ಬೈಂದೂರು).— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಖಾಲಿ ಇರುವ ವೈದ್ಯಾಧಿಕಾರಿ ಹುದ್ದೆಗಳ ಸಂಖ್ಯೆ ಎಷ್ಟು, ಹಾಗೂ ಯಾವ ಯಾವ ಆರೋಗ್ಯ ಸಂಸ್ಥೆಗಳಲ್ಲಿ ಖಾಲಿ ಇವೆ, ಹಾಗೂ ಈ ಹುದ್ದೆಗಳು ಎಂದಿನಿಂದ ಖಾಲಿ ಇರುತ್ತವೆ ?

ಆ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು).—

ಅ) ೪೦ ಹುದ್ದೆಗಳು ಖಾಲಿ ಇವೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಆದಷ್ಟು ಬೇಗನೆ ಕೆಲವು ಸ್ಥಾನಗಳನ್ನು ತುಂಬಲಾಗುವುದು.

ಅನುಬಂಧ

ದಕ್ಷಿಣ ಕನ್ನಡ ಜಿಲ್ಲೆಯ ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಯ ವಿವರಗಳು

			ಖಾಲಿ ಇರುವ ದಿನಾಂಕ
೧)	ಸಹಾಯಕ ಜಿಲ್ಲಾ ಆ.ಕು.ಕ. ಅಧಿಕಾರಿ—೩	ಅ) ಕುಂದಾಪುರ ಉಪ ವಿಭಾಗ	೬-೨-೧೯೮೮
		ಆ) ಪುತ್ತೂರು ,,	೧೪-೬-೧೯೮೯
		ಇ) ಮಂಗಳೂರು ,,	೧-೨-೧೯೮೯
೨)	ಉಪ ಶಸ್ತ್ರ ಚಿಕಿತ್ಸಕರು—೨	ಅ) ಪಿ.ಪಿ.ಸಿ. ಕುಂದಾಪುರ	೧೨-೧೧-೧೯೮೧
		ಆ) ಸಾರ್ವಜನಿಕ ಆಸ್ಪತ್ರೆ, ಪುತ್ತೂರು	೧೯-೬-೧೯೮೪